**ಅ. ದಾ. ಸಂ. : 147/2014**
**ಡಿ.ಡಬ್ಲ್ಯೂ : 01 ಪುಷ್ಪಾವತಿ**

**ದಿನಾಂಕ : 19-04-2023 ರಂದು** ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲು :- ವಾದಿಯ ಪರ ಶ್ರೀ.**ಎ ಎಸ್ ಎಸ್ **, ವಕೀಲರಿಂದ :-**

1. ನಾನು ಈ ಹಿಂದೆ ನನ್ನ ವಿಚಾರಣೆಯ ಹಂತದಲ್ಲಿ ವಾದಿಗೆ ದಾವಾಆಸ್ತಿಯನ್ನು ಮಾನವೀಯತೆಯ ದೃಷ್ಟಿಯಿಂದ ಬಿಟ್ಟುಕೊಟ್ಟಿದ್ದೇವೆ ಎಂದು ಹೇಳಿದ್ದು , ಮತ್ತು ಸ್ವಾಧೀನವನ್ನು ವಾದಿಯಿಂದ ವಾಪಸ್ ಕೇಳುವ ಸಮಯದಲ್ಲಿ ಪಂಚಾಯ್ತಿಯನ್ನು ಮಾಡಿದ್ದು ಸದರಿ ಪಂಚಾಯ್ತಿದಾರರನ್ನು ಸಾಕ್ಷಿಯಾಗಿ ವಿಚಾರಣೆ ಮಾಡಿಸುತ್ತೀರಾ ಎಂದರೆ ಹೌದು. ವಾದಿಯು ಈ ದಾವೆಯನ್ನು ಹಾಕುವ 3-4 ತಿಂಗಳುಗಳ ಹಿಂದೆ ಪಂಚಾಯ್ತಿಯನ್ನು ಮಾಡಿದ್ದೆವು. ಆ ಸಮಯದಲ್ಲಿ ವಾದಿಯು ಇನ್ನೂ ಕಾನೂನುಬದ್ದ ನೋಟೀಸನ್ನು ನಮಗೆ ನೀಡಿರಲಿಲ್ಲ.

2. ನಿಪಿ-1 ರಬಗ್ಗೆ ನನಗೆ ಮೊದಲ ಭಾರಿಗೆ ವಾದಿಯು ಕಾನೂನುಬದ್ಧ ನೋಟೀಸನ್ನು ಕಳುಹಿಸಿದ ಸಮಯದಲ್ಲಿ ಗೊತ್ತಾಯಿತು. ನಾನು ನನ್ನ ಪ್ರತ್ಯುತ್ತರ ನೋಟೀಸಿನಲ್ಲಿ ನಿಪಿ-1 ಅನ್ನು ಸೃಷ್ಟಿ ಮಾಡಿದ್ದಾರೆ ಎಂದು ಹೇಳಿದ್ದೇನೆ, ಅದಕ್ಕೆ ಸಂಬಂಧಿಸಿದಂತೆ ನಾನು ನಿಪಿ-1 ನ್ನು ವಾದಿಯಿಂದ ಪಡೆದು ಪರಿಶೀಲನೆ ಮಾಡಿಲ್ಲ ಎಂದರೆ ಸರಿ. ನಾನು ಮತ್ತು ಇತರೆ ಪ್ರತಿವಾದಿಗಳು ನಿಪಿ-1 ರಂತೆ ಸ್ವಾಧೀನವನ್ನು ವಾದಿಗೆ ಮಾನವೀಯತೆಯ ದೃಷ್ಟಿಯಿಂದ ಬಿಟ್ಟುಕೊಟ್ಟಿದ್ದೇವೆ, ಆದ ಕಾರಣ ನಿಪಿ-1 ಅನ್ನು ವಾದಿಯು ಸೃಷ್ಟಿ ಮಾಡಿರುತ್ತಾರೆ ಮತ್ತು ಅದೇ ಆಧಾರದ ಮೇಲೆ ನಾನು -

ನನ್ನ ಪ್ರತ್ಯುತ್ತರ ನೋಟೀಸನ್ನು ನೀಡಿರುತ್ತೇನೆ. ನಿಪಿ-1 ಕ್ಕೆ ನನ್ನ ತಂದೆ ಮತ್ತು 1 ನೇ ವಾದಿ ಪಕ್ಷಗಾರರಾಗಿದ್ದು, 1 ನೇ ವಾದಿಗೆ ಅನಾರೋಗ್ಯ ಇರುವ ಕಾರಣ ಅವರ ಪರವಾಗಿ ನಾನು ಸಾಕ್ಷ್ಯವನ್ನು ಹೇಳುತ್ತಿದ್ದೇನೆ ಮತ್ತು ಅವರನ್ನು ನ್ಯಾಯಾಲಯಕ್ಕೆ ಕರೆಸಲು ಆಗುವುದಿಲ್ಲ. 1 ನೇ ವಾದಿಯು ಸಕ್ಕರೆ ಖಾಯಿಲೆ , ಹೃದಯ ಸಂಬಂಧಿ ಖಾಯಿಲೆ ಮತ್ತು ಇತರೆ ಖಾಯಿಲೆಗಳಿಂದ ಬಳಲುತ್ತಿದ್ದಾರೆ ಆದ ಕಾರಣ ಅವರನ್ನು ನ್ಯಾಯಾಲಯಕ್ಕೆ ಕರೆಸಲು ಆಗುವುದಿಲ್ಲ.

**ಈ ಹಂತದಲ್ಲಿ ಮುಂದುವರೆದ ಪಾಟೀ ಸವಾಲಿಗೆ ವಾದಿಯ ಪರ ವಕೀಲರು ಸಮಯ ಕೋರಿದ್ದರಿಂದ ಸಮಯ ನೀಡಲಾಯಿತು.**

**ಓ. ಹೇ. ಕೇ. ಸ. ಇ. ಎ. ಓಪ್ಪಿರುತ್ತಾರೆ,**

**2 ನೇ ಅ. ಸಿ. ಜ. ಮತ್ತು ಜೆ.ಎಂ.ಎಫ್.ಸಿ, ಮಾಗಡಿ.**